2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 10/2021</u>

| | | |
|---|---|---|
| ಸಾಕ್ಷಿದಾರರ ಹೆಸರು | - ಬಿ.ಆರ್.ರೂಪ | ಪಿಡಬ್ಲೂ - 05 |
| ಗಂಡನ ಹೆಸರು | - ಕುಮಾರ್ | ಸಿಡಬ್ಲೂ - 26 |
| ವಯಸ್ಸು | - 49 ವರ್ಷ | |
| ಉದ್ಯೋಗ | - ಪ್ರಧಾನ ವ್ಯವಸ್ಥಾಪಕರು, ಆಡಳಿತ ಮತ್ತು ಮಾನವ ಸಂಪನ್ಮೂಲ, ಚೆಸ್ಕಾಂ, ಮೈಸೂರು | |
| ವಾಸ ಸ್ಥಳ | - ಮೈಸೂರು | |

ದಿನಾಂಕಃ **28.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ದಿಃ 13.08.2018 ರಿಂದ ದಿಃ 10.03.2020 ರವರೆಗೆ ತರೀಕೆರೆ ಉಪ ವಿಭಾಗಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿಃ 19.10.2019 ರಂದು ತರೀಕೆರೆ ಪೋಲೀಸ್ ಉಪಾಧೀಕ್ಷಕರು ಮನವಿ ಸಲ್ಲಿಸಿ ಮೃತ ತಬರಕ್ ಬಾನು ಇವರ ಹೂತಿದ್ದ ಶವವನ್ನು ನಿಯಮಾನುಸಾರ ತೆಗೆದು ಶವ ತನಿಖೆ ನಡೆಸುವಂತೆ ಮನವಿ ಸಲ್ಲಿಸಿದ್ದರು.
3. ದಿಃ 21.10.2019 ರಂದು ವೈದ್ಯಕೀಯ ಆಡಳಿತಾಧಿಕಾರಿಗಳು, ಮೆಗ್ಗಾಂ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಶಿವಮೊಗ್ಗ ಇವರಿಗೆ ಶವ ತನಿಖೆ ನಂತರ ಮರಣೋತ್ತರ ಪರೀಕ್ಷೆ ನಡೆಸುವಂತೆ ಮನವಿ ಸಲಿಸಿದ್ದೇನೆ. ವೈದ್ಯಕೀಯ ಆಡಳಿತಾಧಿಕಾರಿಗಳು, ಮೆಗ್ಗಾಂ ಆಸ್ಪತ್ರೆಯವರು ವರದಿ ನೀಡಿ ದಿಃ 02.11.2019 ರಂದು ದಿನಾಂಕ ನಿಗದಿಪಡಿಸಿದರು.
4. ದಿಃ 02.11.2019 ರಂದು ಬೆಳಿಗ್ಗೆ 10.00 ಗಂಟೆ ಸಮಯಕ್ಕೆ ಅಜ್ಜಂಪುರ ತಾಲ್ಲೂಕು ಗೌರಾಪುರ ಕಬರಸ್ಥಾನಕ್ಕೆ ನಾನು, ಅಜ್ಜಂಪುರ

ಪೋಲೀಸರು, ವೈದ್ಯಾಧಿಕಾರಿಗಳು-ಮೆಗ್ಗಾಂ ಆಸ್ಪತ್ರೆ ಮತ್ತು ನಮ್ಮ ಸಿಬ್ಬಂದಿ ಎಲ್ಲರೂ ಸೇರಿ ಬೇಟಿ ನೀಡಿದೆವು. ಪೋಲೀಸರು ಮೃತಳ ಶವ ಹೂತ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿದರು. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು.

5. ನಿಪಿ.6 ರ ಮಹಜರನ್ನು ಬೆಳಿಗ್ಗೆ 10.45 ರಿಂದ 11.00 ಗಂಟೆ ವರೆಗೆ ಜರುಗಿಸಲಾಯಿತು. ಮೃತಳ ಶವವನ್ನು ಹೂತ ಸ್ಥಳವನ್ನು ಮೃತಳ ತಂದೆ ತೋರಿಸಿದರು.

6. ಸ್ಥಳೀಯರ ಸಹಾಯದಿಂದ ಹೂತ ಶವವನ್ನು ಮೇಲಕ್ಕೆ ಎತ್ತಲಾಯಿತು. ಶವಕ್ಕೆ ಸುತ್ತಿದ ಬಟ್ಟೆ ಹರಿದಂತಾಗಿದ್ದು ಶವದ ಚರ್ಮ ಕಪ್ಪು ಬಣ್ಣಕ್ಕೆ ತಿರುಗಿತ್ತು, ಶವ ಕೊಳೆತ ಸ್ಥಿತಿಯಲ್ಲಿತ್ತು.

7. ಪೋಲೀಸರು ಸ್ಥಳಕ್ಕೆ ಪಂಚರನ್ನು ಕರೆಸಿದ್ದರು. ನಾನು ಪಂಚರನ್ನು ಪ್ರಶ್ನಿಸಿದ್ದೇನೆ. ಯಾವ ಕಾರಣಕ್ಕೆ ತಬರಕ್ ಬಾನು ಮರಣಹೊಂದಿದ್ದಳು ಎಂದು ವಿಚಾರಿಸಿದ್ದೆನು. ಪಂಚರು ಮೃತಳ ಗಂಡ ಆಟೋ ಖರೀದಿಸಲು ಮೃತಳ ತವರು ಮನೆಯವರು ವರದಕ್ಷಿಣೆ ಹಣ ನೀಡಲಿಲ್ಲ ಎಂಬ ಕಾರಣಕ್ಕೆ 3-4 ಬಾರಿ ಗಲಾಟೆಯಾಗಿ ಮೃತಳ ಮೇಲೆ ಹಲ್ಲೆ ನಡೆದಿದ್ದರಿಂದ ಮರಣಹೊಂದಿದ್ದಾಳೆಂದು ಮಾಹಿತಿ ನೀಡಿದರು. ಮದ್ಯಾಹ್ನ 12.00 ಗಂಟೆಯಿಂದ 2.00 ಗಂಟೆಯ ಸಮಯದಲ್ಲಿ ನಾನು ತಯಾರಿಸಿದ ಶವ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.9(ಬಿ) ಎಂದು ಗುರುತಿಸಲಾಯಿತು.

8. ಶವ ಪಂಚನಾಮೆ ಕಾಲದಲ್ಲಿ ಮೃತಳ ಸಂಬಂಧಿಕರನ್ನು ವಿಚಾರಿಸಿ ಹೇಳಿಕೆ ಪಡೆದಿದ್ದೇನೆ. ಶವ ಹೊರತೆಗೆಯುವ ಭಾವಚಿತ್ರಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.10 ಮತ್ತು 11 ಎಂದು ಗುರುತಿಸಲಾಗಿದೆ. ನಂತರ ಶವ ಪಂಚನಾಮೆ ಮತ್ತು ಹೇಳಿಕೆಗಳನ್ನು ತನಿಖಾಧಿಕಾರಿಗೆ ಹಸ್ತಾಂತರಿಸಿದ್ದೇನೆ.

9. ಪಂಚರಿಗೆ ನಾನು ನೀಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.8(ಬಿ) ಎಂದು ಗುರುತಿಸಲಾಯಿತು.

10. ತನಿಖಾಧಿಕಾರಿಗಳಿಗೆ ನೀಡಿದ ಕವಚಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.18 ಎಂದು ಸಾಕ್ಷಿಯ ಸಹಿಯನ್ನು ನಿಪಿ.18(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು: ಶ್ರೀ.ಕೆ.ಎನ್.ಸಿ., ವಕೀಲರಿಂದ ಆರೋಪಿ ಪರವಾಗಿಃ</u>

11. ತನಿಖಾಧಿಕಾರಿ ನನಗೆ ನೀಡಿದ ಮನವಿ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ವೈದ್ಯರಿಗೆ ನೀಡಿದ ಕೋರಿಕೆ ಪತ್ರದ ಪ್ರತಿಯನ್ನು ತನಿಖಾಧಿಕಾರಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆಯೇ ಎಂದು ನನಗೆ ಮಾಹಿತಿ ಇಲ್ಲ. ತನಿಖಾಧಿಕಾರಿ ನಾನು ವೈದ್ಯರಿಗೆ ಬರೆದ ಮನವಿಯ ಪ್ರತಿಯನ್ನು ಸಂಗ್ರಹಿಸಿದ್ದಾರೆ. ಮೆಗ್ಗಾನ್ ಆಸ್ಪತ್ರೆ ವೈದ್ಯರು ದಿನಾಂಕ ನಿಗದಿ ಮಾಡಿ ನಮ್ಮ ಕಚೇರಿಗೆ ನೀಡಿದ ಪತ್ರದ ಪ್ರತಿಯನ್ನು ತನಿಖಾಧಿಕಾರಿಗೆ ನೀಡಿದ್ದೇನೆ.

12. ನಿಪಿ.8ರ ನೋಟೀಸು ನಮ್ಮ ಕಚೇರಿಯಿಂದ ಶವ ತನಿಖೆ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರಿಗೆ ನೀಡಿದ ನೋಟೀಸು ಅಲ್ಲ ಎಂದರೆ ಸರಿಯಲ್ಲ. ನಿಪಿ.6 ಮತ್ತು 9ರ ದಾಖಲೆಯನ್ನು ನನ್ನ ಉಕ್ತಲೇಖನದ ಮೇರೆಗೆ ಪೋಲೀಸ್ ಸಿಬ್ಬಂದಿ ಬರೆದಿದ್ದಾರೆ. ನಿಪಿ.6

ಮತ್ತು 9ರ ದಾಖಲೆಯನ್ನು ಬರೆದವರ ಸಹಿ ದಾಖಲೆಯ ಮೇಲೆ ಪಡೆಯಲು ನನಗೆ ತೊಂದರೆ ಇರಲಿಲ್ಲ.

13. ನಾನು ಶವ ತನಿಖೆ ನಡೆಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ತಯಾರಿಸಿದ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸಾಕ್ಷಿದಾರರು ನನ್ನ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಪಂಚರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ